ಗಂಟೆಯವರೆಗೆ ಏನು ಪೀಕ್ ಅವರ್ ಇದೆ ಅದೊಂದು ದೊಡ್ಡ ಸಮಸ್ಯೆ. ಅದಕ್ಕೆ ಸರ್ಕಾರವನ್ನು ಕೇಳುತ್ತೇನೆ ಬೆಂಗಳೂರಿನಲ್ಲಿ ಪೀಕ್ ಅವರನ್ನು ಅವಾಯ್ಡ್ ಮಾಡುವುದಕ್ಕೆ ಬೆಂಗಳೂರಿನಲ್ಲಿ ಈ ವರ್ಕಿಂಗ್ ಅವರ್ಸ್‌ನ್ನು ಸ್ಟ್ಯಾಗ್ಗರ್ ಮಾಡುವುದಕ್ಕೆ ಏನಾದರೂ ಯೋಚನೆ ಮಾಡುತ್ತಿದೆಯೋ? ಎಲ್ಲರೂ 9 ಗಂಟೆಯಿಂದ 12 ಗಂಟೆಗೆ ಓಡಾಡುವ ಬದಲು ಶಾಲೆಗಳು ಇವೆ, ಫ್ಯಾಕ್ಟರಿಗಳು ಇವೆ, ಅನೇಕ ಸರ್ಕಾರಿ ಸಂಸ್ಥೆಗಳು ಇವೆ, ಬೇರೆ ಬೇರೆ ಸಂಸ್ಥೆಗಳು ಇವೆ, ಈ ಪೀಕ್ ಅವರನ್ನು ಸ್ಟ್ಯಾಗರ್ ಮಾಡಿಬಿಟ್ಟು ಇಡೀ ದಿವಸದಲ್ಲಿ ಹೊರಡಲಿಕ್ಕೆ ಏನಾದರೂ ಕ್ರಮ ಅಥವಾ ಯೋಚನೆ ಸರ್ಕಾರಕ್ಕೆ ಇದೆಯೋ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಬೆಂಗಳೂರಿನಲ್ಲಿ ಎಲ್ಲಾ ಗಂಟೆಗಳು ಪೀಕ್ ಅವರ್ ಆಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಸ್ಟ್ಯಾಗರಿಂಗ್ ಆಫ್ ವರ್ಕಿಂಗ್ ಅವರ್ಸ್ ಬಗ್ಗೆ ಹೇಳುವುದಾದರೆ ಈಗಾಗಲೇ ಇಂಡೈರೆಕ್ಟ್ ಆಗಿ ಕೆಲವು ಸೆಂಟ್ರಲ್ ಗವರ್ನ್‌ಮೆಂಟ್, ಸ್ಟೇಟ್ ಗವರ್ನಮೆಂಟ್ ಎಸ್ಟಾಬ್ಲಿಷ್‌ಮೆಂಟ್‌ನ ಕಛೇರಿಯ ವೇಳೆಯಲ್ಲಿ ಬದಲಾವಣೆ ಇದೆ ಶಾಲಾ ಕಾಲೇಜುಗಳನ್ನು ಮತ್ತು ಇತರರನ್ನು ನಾವು ಸ್ಟ್ರಿಕ್ಟ್ ಆಗಿ ಎನ್‌ಫೋರ್ಸ್ ಮಾಡಬೇಕಾದರೆ ಅದು ಕಾನೂನು ಮೂಲಕವೇ ಮಾಡುವುದಕ್ಕಾಗುವುದಿಲ್ಲ. ಅವರ ಕನ್ವೀನಿಯನ್ಸ್ ಕೂಡ ನಾವು ನೋಡಬೇಕಾಗುತ್ತದೆ. ಇದೊಂದು ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ:- ಸವಣೂರು ತಾಲ್ಲೂಕು ಕಳಸೂರು ಬ್ಯಾರೇಜ್ ನಿರ್ಮಾಣ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 217 (1155)

ಶ್ರೀ ಮಂಜುನಾಥ ಸಿ.ಕುನ್ನೂರ್(ಶಿಗ್ಗಾಂವ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಸವಣೂರು ತಾಲ್ಲೂಕು ಕಳಸೂರು ಬ್ಯಾರೇಜ್ ಮತ್ತು ಬ್ರಿಡ್ಜ್ ಕೆಲಸಕ್ಕಾಗಿ ಹಿಂದಿನ ಸಚಿವರು ಎಂದು ಅಡಿಗಲ್ಲು ಹಾಕಿದರು?

ಆ)ಸದರಿ ಕೆಲಸವನ್ನು ಎಂದು ಪ್ರಾರಂಭಿಸಲಾಗುವುದು?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್(ಸಣ್ಣ ನೀರಾವರಿ ರಾಜ್ಯ ಸಚಿವೆಯವರು):-

ಅ) ದಿನಾಂಕ 28-5-93.

ಆ) ಈ ಕಾಮಗಾರಿಯ ಆರ್ಥಿಕ ಮತ್ತು ತಾಂತ್ರಿಕ ಶಕ್ಯತೆಯ ಬಗ್ಗೆ ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಮಂಜುನಾಥ ಸಿ. ಕುನ್ನೂರ್:- ಸನ್ಮಾನ್ಯ ಅಧ್ಯಕ್ಷರೇ ಉತ್ತರದಲ್ಲಿ ಸವಣೂರು ತಾಲ್ಲೂಕಿನ ಕಳಸೂರು ಬ್ಯಾರೇಜ್ ಮತ್ತು ಬ್ರಿಡ್ಜ್ ಕೆಲಸಕ್ಕಾಗಿ ಎಂದು ಅಡಿಗಲ್ಲು ಹಾಕಲಾಯಿತು ಎನ್ನುವ ಪ್ರಶ್ನೆಗೆ ದಿನಾಂಕ 28.5.1993 ರಂದು ಎಂದು ಸಚಿವರು ಉತ್ತರ ಕೊಟ್ಟಿದ್ದಾರೆ. ಉತ್ತರದಲ್ಲಿ ಈ ಕಾಮಗಾರಿ ಇನ್ನೂ ಪ್ರಾರಂಭ ಮಾಡಲಿಲ್ಲ, ಆರ್ಥಿಕ ಮತ್ತು ತಾಂತ್ರಿಕ ಅವಶ್ಯಕತೆ ಬಗ್ಗೆ ಪರಿಶೀಲಿಸಬೇಕು ಎಂದು ಹೇಳಿದ್ದಾರೆ. ಈಗ ಸುಮಾರು ಎರಡು ವರ್ಷಗಳ ಹಿಂದೆಯೇ ಇದನ್ನು ತೆಗೆದುಕೊಳ್ಳಬೇಕು ಎಂದು ಮಾಡಿದ್ದರು, ಆದರೂ ಆಗಿಲ್ಲ, ಇಷ್ಟು ವಿಳಂಬ ಏತಕ್ಕೆ ಆಗುತ್ತಿದೆ. ಕಳಸೂರು ವರದಾ ನದಿ ತೀರದೊಳಗೆ ಇಂತಹ ಬ್ಯಾರೇಜ್‌ಗಳು ನೀರಾವರಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡತಕ್ಕಂಥ ಸಮಯದೊಳಗೆ ಮಾಡಲಿಕ್ಕೆ ಆಗದಿದ್ದರೆ ಸರ್ಕಾರದವರು ಇನ್ನು ಯಾವ ತರಹ ಅಭಿವೃದ್ಧಿ ಕೆಲಸವನ್ನು

ಕೈಗೊಳ್ಳಬೇಕು ಎಂದು ಮಾಡಿದ್ದಾರೆ ಎನ್ನತಕ್ಕಂಥ ಪ್ರಶ್ನೆ ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ.

ಶ್ರಿಮತಿ ಲೀಲಾದೇವಿ ಆರ್ ಪ್ರಸಾದ್:- ಮಾನ್ಯ ಅಧ್ಯಕ್ಷರೇ, ಸವಣೂರು ತಾಲ್ಲೂಕಿನ ಕಳಸೂರು ವರದಾ ನದಿಗೆ ಅಡ್ಡಲಾಗಿ ಬ್ಯಾರೇಜನ್ನು ನಿರ್ಮಾಣ ಮಾಡುವುದಕ್ಕೋಸ್ಕರ ಹಿಂದಿನ ಸಚಿವರು ಆದಂಥ ಚೌದರಿಯವರು ದಿನಾಂಕ 28.5.93 ರಂದು ಅಡಿಗಲ್ಲನ್ನು ಹಾಕಿದ್ದಾರೆ. ಅಡಿಗಲ್ಲನ್ನು ಹಾಕುವುದಕ್ಕೆ ಮೊದಲು ಅದಕ್ಕೆ ತಾಂತ್ರಿಕವಾದಂಥ ಒಂದು ಅನುಮತಿಯನ್ನು ನೀಡಬೇಕು, ಆ ಅನುಮತಿ ಇಲ್ಲದೇ ಇದ್ದಲ್ಲಿ ತಾಪತ್ರಯ ಆಗುತ್ತದೆ ಎನ್ನುವಂಥದ್ದು ಅರ್ಥ ಮಾಡಿಕೊಳ್ಳಬೇಕು. ಸುಮಾರು 417 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಒದಗಿಸಲು 99 ಲಕ್ಷ ರೂಪಾಯಿಗಳ ಅಂದಾಜು ಪಟ್ಟಿ ತಯಾರಿಸಲಾಗಿತ್ತು. ಈ ಕಾಮಗಾರಿಯನ್ನು 1995-96 ನೇ ಸಾಲಿನ ಆಯವ್ಯಯ ಪತ್ರದಲ್ಲಿ 10 ಲಕ್ಷ ರೂಪಾಯಿಗಳಿಗೆ ಅನುದಾನ ಸಿಕ್ಕಿದೆ. ಈ ಯೋಜನೆಯ ಆರ್ಥಿಕ ಹಾಗೂ ತಾಂತ್ರಿಕ ಶಕ್ಯತೆಯನ್ನು ಪರಿಶೀಲಿಸಿ ಮುಂದಿನ ಕ್ರಮ ಸಾಧ್ಯವಾದಷ್ಟು ಬೇಗ ತೆಗೆದುಕೊಳ್ಳತ್ತೇವೆ.

ಅಧ್ಯಕ್ಷರು:- ಶ್ರೀ ಡಿ.ಆರ್.ಪಾಟೀಲ್, ಬಂದಿಲ್ಲ. ಶ್ರೀ ಸಗೀರ್ ಅಹ್ಮದ್‌ರವರೇ ನಿಮ್ಮ ಪ್ರಶ್ನೆ ತಡೆ ಹಿಡಿಯಲಾಗಿದೆ, ಸ್ವಲ್ಪ ಸಮಯದ ನಂತರ ಉತ್ತರ ಒದಗಿಸಿಕೊಡುತ್ತೇನೆ.

ಶ್ರೀ ಸಿ.ಆರ್.ಸಗೀರ್ ಅಹ್ಮದ್:- ಮಾನ್ಯ ಅಧ್ಯಕ್ಷರೇ ಪ್ರಶ್ನೆಗಳು ಬರುವಂಥದ್ದು ಬಹಳ ಅಪರೂಪ

ಅಧ್ಯಕ್ಷರು:- ಇನ್ನು ಮೇಲೆ ಸರಿ ಮಾಡೋಣ.

ವಿಷಯ:-ಮಂಗಳೂರಿನಲ್ಲಿ ಪೋಲೀಸ್ ಅತಿಥಿಗೃಹ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 220(2119)

ಶ್ರೀ ಎನ್.ಯೋಗೀಶ್‌ಭಟ್ (ಮಂಗಳೂರು):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಮಂಗಳೂರಿನಲ್ಲಿ ನಿರ್ಮಿತವಾಗಲಿರುವ ಪೋಲೀಸ್ ಅತಿಥಿ ಗೃಹ (ಪೋಲೀಸ್ ಮೆಸ್) ಪೂರ್ಣಗೊಳ್ಳುವಂತೆ ಸರಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಪಿ.ಜಿ.ಆರ್ ಸಿಂಧ್ಯ (ಗೃಹ ಸಚಿವರು):-

ಅ) ಅತಿಥಿ ಗೃಹವನ್ನು ಪೂರ್ಣಗೊಳಿಸಲು ಕ್ರಮ ಈಗಾಗಲೇ ಕೈಗೊಳ್ಳಲಾಗಿದೆ. ಈ ಅತಿಥಿಗೃಹವು ಡಿಸೆಂಬರ್ 1995ರ ವೇಳೆಗೆ ಪೂರ್ಣಗೊಳ್ಳುವ ಸಾಧ್ಯತೆ ಇದೆ.

ಶ್ರೀ ಎನ್.ಯೋಗೇಶ್ ಭಟ್:- ಪೋಲೀಸ್ ಅತಿಥಿ ಗೃಹ ಕಟ್ಟಡ ಆರಂಭವಾಗಿ ಎಷ್ಟು ವರ್ಷವಾಯಿತು? ಈಗಾಗಲೇ ತಗಲಿದ ಖರ್ಚೆಷ್ಟು? ಕಟ್ಟಡ ಅರ್ಧದಲ್ಲಿ ನಿಲ್ಲಲ್ಲು ಕಾರಣವೇನು? ಸರ್ಕಾರದ ಆಕ್ಷೇಪ ಏನಾದರೂ ಇದರಲ್ಲಿ ಇದೆಯೇ? ಮತ್ತೆ ಪೂರ್ಣಗೊಳ್ಳಲು ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಲಿದೆ?

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಈ ಒಂದು ಪೋಲಿಸ್ ಅತಿಥಿ ಗೃಹಕ್ಕೆ 1988ನೇ ಸಾಲಿನಲ್ಲಿ ಈ ಕೆಲಸ ಪ್ರಾರಂಭ ಮಾಡಬೇಕು ಎಂದು ಹೇಳಿ ಕೆಲವು ಖಾಸಗೀ ಸಂಘಸಂಸ್ಥೆಗಳು ಹಣ ಕೊಟ್ಟಿವೆ, ಕಟ್ಟಿಕೊಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟು ಎಂಭತ್ತು ಸಾವಿರದಷ್ಟು ಅವರು ಹಣವನ್ನು ಮೆಟೀರಿಯಲ್ ರೂಪದಲ್ಲಿ ಸಹಾಯ ಮಾಡಿದ್ದಾರೆ. ಆದಾದನಂತರ ಅವರು ಪೂರ್ತಿ ಕಟ್ಟಿಕೊಡುತ್ತೇವೆ ಎಂದು ಹೇಳಿ ಆವೊತ್ತಿನ ಎಸ್ಟಿಮೇಟ್ ಪ್ರಕಾರ ಒಂದು ಲಕ್ಷ ರೂಪಾಯಿ ಮೂವತ್ತು ಸಾವಿರ ರೂಪಾಯಿಗಳು ಇತ್ತು. ಈಗ ಆದರ ಎಸ್ಟಿಮೇಟ್ ಸುಮಾರು ಹನ್ನೆರಡು ಲಕ್ಷ ರೂಪಾಯಿ